ಕರ್ನಾಟಕ ಸರ್ಕಾರ

(ವಾಣಿಜ್ಯ ತೆರಿಗೆಗಳ ಇಲಾಖೆ)

**ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಆಡಳಿತ), ಸರಕು ಮತ್ತು ಸೇವಾ ತೆರಿಗೆ-3, ಬೆಂಗಳೂರು ಇವರ ನಡಾವಳಿಗಳು**

ಸಂಖ್ಯೆ: ಡಿ-1/ಸಿ.ಆರ್-14/2020-21 ದಿನಾಂಕ : 01.04.2021

ಸಿ ಸಂಖ್ಯೆ: 11/21-22

## ಅಧಿಸೂಚನೆ

ವಿಷಯ: ಈ ಕಛೇರಿಯಲ್ಲಿನ ಹಳೆಯ ಅನುಪಯುಕ್ತ ಗಣಕಯಂತ್ರ ಹಾಗೂ ಇದಕ್ಕೆ ಸಂಬಂಧಿಸಿದ ಇತರ ವಿದ್ಯುನ್ಮಾನ ಉಪಕರಣಗಳನ್ನು ಬಹಿರಂಗ ಹರಾಜು ಮುಖಾಂತರ ವಿಲೇವಾರಿ ಮಾಡುವ ಕುರಿತು.

ಉಲ್ಲೇಖ:
1. ಭಾರತ ಸರ್ಕಾರದ ಪರಿಸರ ಮತ್ತು ಅರಣ್ಯ ಇಲಾಖೆ, ನವದೆಹಲಿ, ಇವರ ಅಧಿಸೂಚನೆ ದಿನಾಂಕ: 12.05.2011
2. ಸರ್ಕಾರದ ಸುತ್ತೋಲೆ ಸಂಖ್ಯೆ: ಸಿ ಆಸುಇ 46 ಇಆಇ 2013 ದಿನಾಂಕ: 06.08.2013.
3. ಆಯುಕ್ತರವರ ಸುತೋಲೆ ಪತ್ರ ಸಂ. ಸಿಸಿಡಬ್ಲ್ಯೂ/ಸಿ.ಆರ್-16/2014-15, ದಿನಾಂಕ: 22.01.2015.
4. ಆಯುಕ್ತರವರ ಕಛೇರಿ ಪತ್ರ ಸಂಖ್ಯೆ: ಸಿಸಿಡಬ್ಲ್ಯೂ/ಸಿ.ಆರ್-16/2014-15, ದಿನಾಂಕ: 13.02.2020 ಹಾಗೂ 26.05.2020.
5. ಈ ಕಛೇರಿಯ ಸಮ ಪತ್ರ ಸಂಖ್ಯೆ ದಿನಾಂಕ: 12.03.2021.
6. ಆಯುಕ್ತರವರ ಕಛೇರಿಯ ಪತ್ರದ ಸಂಖ್ಯೆ: ಸಿಸಿಡಬ್ಲ್ಯೂ/ಸಿ.ಆರ್-16/2014-15, ದಿನಾಂಕ :25.03.2021.

*********

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ಈ ಕಛೇರಿಯಲ್ಲಿನ ಹಳೆಯ ಅನುಪಯುಕ್ತ ಗಣಕಯಂತ್ರ ಹಾಗೂ ಇದಕ್ಕೆ ಸಂಬಂಧಿಸಿದ ಇತರ ವಿದ್ಯುನ್ಮಾನ ಉಪಕರಣಗಳನ್ನು ಹರಾಜು ಪ್ರಕ್ರಿಯೆಯ ಮುಖಾಂತರ ವಿಲೇವಾರಿ ಮಾಡಲು ದಿನಾಂಕ: **16.04.2021ರ ಬೆಳಿಗ್ಗೆ 11.30** ಗಂಟೆಗೆ ಹರಾಜು ಪ್ರಕ್ರಿಯೆಗಾಗಿ ಅಧಿಸೂಚನೆಯನ್ನು ಹೊರಡಿಸಲಾಗಿದ್ದು **ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಬೆಂಗಳೂರು** ಇವರಿಂದ ನೊಂದಣಿಯೊಂದಿಗೆ ಅರ್ಹತೆಯನ್ನು ಹೊಂದಿರುವ ಬಿಡ್ಡುದಾರರು ಮಾತ್ರ ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸಬಹುದಾಗಿರುತ್ತದೆ.

ಅನುಪಯುಕ್ತ ಗಣಕಯಂತ್ರ ಹಾಗೂ ಇದಕ್ಕೆ ಸಂಬಂಧಿಸಿದ ಇತರ ವಿದ್ಯುನ್ಮಾನ ಉಪಕರಣಗಳನ್ನು ಬಹಿರಂಗ ಹರಾಜಿನಲ್ಲಿ ಭಾಗವಹಿಸುವ ಅರ್ಹ ನೊಂದಾಯಿತ ಬಿಡ್ಡುದಾರರು ಈ ಕೆಳಗೆ ಸೂಚಿಸಿರುವ ಷರತ್ತುಗಳು ಮತ್ತು ನಿಬಂಧನೆಗಳಿಗೆ ಒಳಪಟ್ಟಿರಬೇಕಾಗಿರುತ್ತದೆ.

## ಬಹಿರಂಗ ಹರಾಜಿನ ಷರತ್ತು ಮತ್ತು ನಿಬಂಧನೆಗಳು

1. ಪ್ರತಿಯೊಬ್ಬ ಬಿಡ್‌ದಾರರು ಹರಾಜಿನಲ್ಲಿ ಭಾಗವಹಿಸಲು, ಭದ್ರತಾ ಠೇವಣಿಯಾಗಿ ರೂ. 5000.00 (ರೂ. ಐದು ಸಾವಿರ ರೂಪಾಯಿಗಳು) ಡಿ.ಡಿ. ಅಥವಾ ನಗದು ರೂಪದಲ್ಲಿ ಬಹಿರಂಗ ಹರಾಜು ನಡೆಯುವ ಸ್ಥಳದಲ್ಲಿ ಬೆಳಗ್ಗೆ 10.15 ಗಂಟೆಯಿಂದ 11.00 ಗಂಟೆಯೊಳಗೆ ಪಾವತಿಸಿ ತಮ್ಮ ಹೆಸರುಗಳನ್ನು ನೊಂದಾಯಿಸಬೇಕು. 11.00 ಗಂಟೆಯ ನಂತರ ಬಂದ ಬಿಡ್‌ದಾರರ ಹೆಸರುಗಳನ್ನು ಬಹಿರಂಗ ಹರಾಜಿಗೆ ಪರಿಗಣಿಸುವುದಿಲ್ಲ. ಠೇವಣಿ ಹಣಕ್ಕೆ ಯಾವುದೇ ರೀತಿಯಾ ಬಡ್ಡಿಯನ್ನು ಕೊಡಲಾಗುವುದಿಲ್ಲ.
2. ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು(ಆಡಳಿತ), ಸರಕು ಮತ್ತು ಸೇವಾ ತೆರಿಗೆ-3, ಬೆಂಗಳೂರು ಇವರು ನೇಮಿಸಲ್ಪಟ್ಟ ಅಧಿಕಾರಿಗಳಿಂದ ಬಹಿರಂಗ ಹರಾಜನ್ನು ನಡೆಸಲಾಗುವುದು.
3. ಅರ್ಹ ನೊಂದಾಯಿತ ಠೇವಣಿ ಬಿಡ್ಡುದಾರರು ಹರಾಜು ಪ್ರಕ್ರಿಯೆಯ ಸವಾಲಿನಲ್ಲಿ ಭಾಗವಹಿಸಲು ಅರ್ಹರಾಗಿರುತ್ತಾರೆ.
4. ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಬೆಂಗಳೂರು ಇವರಿಂದ ನೊಂದಣಿಯೊಂದಿಗೆ ಅರ್ಹತೆಯನ್ನು ಹೊಂದಿರುವ ಬಿಡ್ಡುದಾರರು ರಾಜ್ಯ ಮಾಲಿನ್ಯ ಮಂಡಳಿಯಾವರು ನೀಡುವ ನೊಂದಣಿ ಪ್ರಮಾಣ ಪತ್ರವನ್ನು ಕಛೇರಿಗೆ ಹಜರು ಪಡಿಸಿ ತದನಂತರ ಹರಾಜು ಪಕ್ರಿಯೆಯಲ್ಲಿ ಭಾಗವಹಿಸಬಹುದಾಗಿರುತ್ತದೆ



ವಾ.ತೆ.ಜಂ.ಆ.(ಆ)

5. ಬಹಿರಂಗ ಹರಾಜಿಗಿಟ್ಟಿರುವ ಅನುಪಯುಕ್ತ ಗಣಕಯಂತ್ರ ಹಾಗೂ ಇದಕ್ಕೆ ಸಂಬಂಧಿಸಿದ ಇತರ ವಿದ್ಯುನ್ಮಾನ ಉಪಕರಣಗಳಿಗೆ ನಿಗದಿ ಪಡಿಸಲಾಗಿರುವ ಕನಿಷ್ಠ ಬೆಲೆ ರೂ.25,000/- (ರೂಪಾಯಿ. ಇಪ್ಪತ್ತೈದು ಸಾವಿರ ಮಾತ್ರ)

6. ಬಹಿರಂಗ ಹರಾಜಿನಲ್ಲಿ ಅತಿ ಹೆಚ್ಚಿನ ಬೆಲೆಯನ್ನು ಸವಾಲಿನ ಮೂಲಕ ದಾಖಲು ಮಾಡಿದ ಬಿಡ್‌ದಾರರನ್ನು ಯಶಸ್ವಿ ಬಿಡ್ಡುದಾರರೆಂದು ಪರಿಗಣಿಸಲಾಗುವುದು.

7. ಯಶಸ್ವಿಯಾದ ಬಿಡ್‌ದಾರರು ಹರಾಜಿನ ಒಟ್ಟು ಬೆಲೆಯ ಶೇ.50 ರಷ್ಟು ಹಣವನ್ನು ಸ್ಥಳದಲ್ಲಿಯೇ ಪಾವತಿಸಬೇಕು. ಉಳಿದ ಶೇ.50 ರಷ್ಟು ಹಣವನ್ನು ನಂತರದ ಏಳು ದಿನಗಳೊಳಗಾಗಿ ಪಾವತಿಸುವುದು. ತಪ್ಪಿದಲ್ಲಿ ಮುಂಗಡವಾಗಿ ಕಟ್ಟಿದ ಶೇ.50 ರಷ್ಟು ಹಣವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವುದಲ್ಲದೇ ನಮೂದಿಸಲ್ಪಟ್ಟ ಸರಕನ್ನು ಮರು ಹರಾಜು ಪ್ರಕ್ರಿಯೆಯ ಮುಖಾಂತರ ವಿಲೇ ಮಾಡಲಾಗುವುದು.

8. ಹರಾಜು ಮಾಡಲ್ಪಡುವ ಮೌಲ್ಯಕ್ಕೆ ಚಾಲ್ತಿಯಲ್ಲಿರುವ 'ಜಿಎಸ್‌ಟಿ' ತೆರಿಗೆಯನ್ನು ಪ್ರತ್ಯೇಕವಾಗಿ ಪಾವತಿ ಮಾಡಬೇಕು.

9. ಹರಾಜಿನಲ್ಲಿ ಭಾಗವಹಿಸಿದ ಬಿಡ್‌ದಾರರು ಹರಾಜು ಮುಗಿದ ನಂತರ ಹರಾಜಿನಲ್ಲಿ ಯಶಸ್ವಿಯಾದವರು ಮತ್ತು ಯಶಸ್ವಿಯಾಗದವರು ಸರ್ಕಾರಿ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.

10. ಯಶಸ್ವಿ ಬಿಡ್ಡುದಾರರು ಪೂರ್ತಿ ಹಣವನ್ನು ಸಂದಾಯ ಮಾಡಿದ ನಂತರ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ನಿಯಾಮಗಳ ಅನುಸಾರ ಅನುಪಯುಕ್ತ ಸಾಮಾಗ್ರಿಗಳನ್ನು ತಮ್ಮ ಸ್ವಂತ ಖರ್ಚಿನಲ್ಲಿ ಜವಾಬ್ದರಿಯುತವಾಗಿ ಸಾಗಾಣಿಕೆ ಮಾಡಿಕೊಳ್ಳುವುದು.

11. ಯಶಸ್ವಿ ಬಿಡ್ಡುದಾರರು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ನಿಯಾಮಾವಳಿಗಳ ಅನುಸಾರ ನಿಗದಿ ಪಡಿಸಿದ ನಮೂನೆಯಲ್ಲಿ ಹರಾಜು ಪ್ರಕ್ರಿಯೆಯ ಸರಕಿನ ವಿವರಗಳನ್ನು ನಮೂದಿಸಿ ಸಂಬಂಧಪಟ್ಟ ಇಲಾಖೆ/ ಕಛೇರಿಗೆ ತಪ್ಪದೇ ಸಲ್ಲಿಸುವುದು.

12. ಹರಾಜು ಪ್ರಕ್ರಿಯೆಯು ಪೂರ್ಣಗೊಂಡ ನಂತರ ಅರ್ಹತೆ ಹೊಂದಿದ ಎಲ್ಲ ಬಿಡ್‌ದಾರರಿಗೆ ಭದ್ರತಾ ಠೇವಣಿಯನ್ನು ಸ್ಥಳದಲ್ಲಿ ಹಿಂತಿರುಗಿಸಲಾಗುವುದು.

13. ಹರಾಜನ್ನು ಅಂಗೀಕರಿಸುವ, ರದ್ದುಪಡಿಸುವ/ತಿರಸ್ಕರಿಸುವ ಅಧಿಕಾರವನ್ನು ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಆಡಳಿತ), ಸರಕು ಮತ್ತು ಸೇವಾ ತೆರಿಗೆ-3, ಬೆಂಗಳೂರು ರವರು ಹೊಂದಿರುತ್ತಾರೆ. ಇವರ ತೀರ್ಮಾನವೇ ಅಂತಿಮವಾಗಿರುತ್ತದೆ

14. ಹರಾಜು ಮಾಡಲಿರುವ ಅನುಪಯುಕ್ತ ಗಣಕಯಂತ್ರ ಹಾಗೂ ಇದಕ್ಕೆ ಸಂಬಂಧಿಸಿದ ಇತರ ವಿದ್ಯುನ್ಮಾನ ಉಪಕರಣಗಳನ್ನು ಕಛೇರಿ ಆವರಣದಲ್ಲಿ ಪರಿಶೀಲನೆಗಾಗಿ ಇಡಲಾಗಿದೆ. ಇಚ್ಛೆಯುಳ್ಳವರು ಕಛೇರಿ ಸಮಯದಲ್ಲಿ ವಾಣಿಜ್ಯ ತೆರಿಗೆಗಳ ಸಹಾಯಕ ಆಯುಕ್ತರು (ಕೇಂದ್ರ ಕಛೇರಿ) ವಿ. ಸ & ಸೇ. ತೆ ಕಛೇರಿ-3 ಇವರನ್ನು ಸಂಪರ್ಕಿಸಿ, ವಿವರಗಳನ್ನು ಪಡೆಯಾಬಹುದಾಗಿರುತ್ತದೆ.

ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು(ಆಡಳಿತ),
ಸರಕು ಮತ್ತು ಸೇವಾ ತೆರಿಗೆ-3, ಬೆಂಗಳೂರು

ಪ್ರತಿಗಳು:

1. ಮಾನ್ಯ ವಾಣಿಜ್ಯ ತೆರಿಗೆಗಳ ಆಯುಕ್ತರು(ಕರ್ನಾಟಕ) ಬೆಂಗಳೂರು ಇವರಿಗೆ ಮಾಹಿತಿಗಾಗಿ ಸಲ್ಲಿಸಲಾಗಿದೆ.
2. ಮಾನ್ಯ ವಾಣಿಜ್ಯ ತೆರಿಗೆಗಳ ಅಪರ ಆಯುಕ್ತರು(ಇ -ಆಡಳಿತ) ಬೆಂಗಳೂರು ಇವರಿಗೆ ಮಾಹಿತಿಗಾಗಿ ಸಲ್ಲಿಸಲಾಗಿದೆ.
3. ವಾಣಿಜ್ಯ ತೆರಿಗೆ ಉಪ ಆಯುಕ್ತರು, ಇ-ಆಡಳಿತ, ವಾಣಿಜ್ಯ ತೆರಿಗೆ ಆಯುಕ್ತರ ಕಛೇರಿ, ಬೆಂಗಳೂರು ರವರಿಗೆ ಅಧಿಸೂಚನೆಯನ್ನು ಇಲಾಖೆಯ ಅಂತರ್ಜಾಲ ತಾಣದಲ್ಲಿ ಪ್ರಕಟಿಸಲು ಕೋರಿದೆ.
4. ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಪರಿಸರ ಭವನ, #49, ಚರ್ಚ್ ಸ್ಟ್ರೀಟ್, ಬೆಂಗಳೂರು-01 ಇವರಿಗೆ ಮಾಹಿತಿಗಾಗಿ ಹಾಗೂ ಅಧಿಸೂಚನೆಯನ್ನು ತಮ್ಮ ಇಲಾಖೆಯ ಅಂತರ್ಜಾಲ ತಾಣದಲ್ಲಿ ಪ್ರಕಟಿಸಲು ಕೋರಿದೆ.
5. ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ನಿಸರ್ಗ ಭವನ, 3ನೇ ಮಹಡಿ, ತಿಮ್ಮಯ್ಯಾ ರಸ್ತೆ ಬೆಂಗಳೂರು-10 ಇವರಿಗ ಮಾಹಿತಿಗಾಗಿ ಹಾಗೂ ಅಧಿಸೂಚನೆಯನ್ನು ತಮ್ಮ ಕಛೇರಿಯ ಸೂಚನಾ ಫಲಕ ದಲ್ಲಿ ಪ್ರಕಟಿಸಲು ಕೋರಿದೆ.
6. ವಾಣಿಜ್ಯ ತೆರಿಗೆಗಳ ಉಪ ಆಯುಕ್ತರು (ಲೆ.ಪ)-3.9 ಇವರಿಗೆ ಮಾಹಿತಿಗಾಗಿ ಹಾಗು ಹರಾಜು ಪ್ರಕ್ರಿಯೆಯನ್ನು ನಿಯಮಾವಳಿಗಳ ಅನುಸಾರ ಕೈಗೊಳ್ಳಲು ಸೂಚಿಸಿದೆ.
7. ವಾಣಿಜ್ಯ ತೆರಿಗೆಗಳ ಸಹಾಯಕ ಆಯುಕ್ತರು (ಕೇಂ.ಕ) ಇವರಿಗೆ ಮಾಹಿತಿಗಾಗಿ ಹಾಗು ಹರಾಜು ಪ್ರಕ್ರಿಯೆಯನ್ನು ನಿಯಮಾವಳಿಗಳ ಅನುಸಾರ ಕೈಗೊಳ್ಳಲು ಸೂಚಿಸಿದೆ.
8. ಆಪ್ತ ಶಾಖೆಗೆ ಮಾಹಿತಿಗಾಗಿ ಹಾಗು ರಾಜ್ಯದ ಎಲ್ಲ ವಿಭಾಗದವರಿಗೆ ಮಿಂಚಂಚೆ ಮುಖಾಂತರ ಅಧಿಸೂಚನೆಯನ್ನು ಕಳುಹಿಸಲು ಸೂಚಿಸಿದೆ.
9. ಕಛೇರಿಯ ಸೂಚನಾ ಫಲಕಕ್ಕೆ.
10. ಕಛೇರಿ ಪ್ರತಿ.